**<u>ಸಾಕ್ಷಿಯನ್ನು ದಿಃ 04.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ.ವಿ.ಎಸ್ ವಕೀಲರಿಂದಃ–</u>**

ಓ.ಎಸ್ ನಂ. 101/ 2018 ರ ದಾವೆ ಡಿಕ್ರಿ ಆಗಿದ್ದು, ಅದರ ಮೇಲೆ ಮೇಲ್ಮನವಿ ಸಲ್ಲಿಸಿದ ಬಗ್ಗೆ ದಾಖಲೆಯನ್ನು ಈ ದಿನ ನಾನು ನ್ಯಾಯಾಲಯಕ್ಕೆ ತಂದಿರುವುದಿಲ್ಲ. ಆ ಬಗ್ಗೆ ದಾಖಲೆ ನಮ್ಮ ವಕೀಲರ ಬಳಿ ಇರುತ್ತದೆ, ನನ್ನ ಬಳಿ ಇರುವುದಿಲ್ಲ. ಈ ಕೇಸ್ ಅನ್ನು ಹಾಕುವ ಮೊದಲೆ ಅಂದರೆ ದಿಃ 26.02.2019 ರಂದು 27 ನೇ ಪ್ರತಿವಾದಿ ಮಂಜುಳಮ್ಮ ತೀರಿಕೊಂಡಿದ್ದರು ಎಂದರೆ ಸರಿ. ಆಕೆ ನನ್ನ ತಂಗಿ ಆಗಬೇಕು. ಆಕೆ ತೀರಿಕೊಂಡ ಬಗ್ಗೆ ನನಗೆ ಸ್ಪಷ್ಟ ಮಾಹಿತಿ ಇತ್ತು, ಅದರೂ ಸಹ ಅವರು ಬದುಕಿದ್ದಾರೆಂದು ಈ ಕೇಸ್ ನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಸರ್ವೆ ನಂ. 10 ರಲ್ಲಿ 14 ಗುಂಟೆ, ಸರ್ವೆ ನಂ. 37/ಬಿ3 ರಲ್ಲಿ 1 ಎಕರೆ 18 ಗುಂಟೆ, ಸರ್ವೆ ನಂ. 58/9 ರಲ್ಲಿ 2 ಎಕರೆ 39 ಗುಂಟೆ ಇವುಗಳು ನನ್ನ ಮತ್ತು ನನ್ನ ತಂದೆಯ ಒಟ್ಟು ಕುಟುಂಬದ ಅಸ್ತಿಗಳು ಎಂದರೆ ಸಾಕ್ಷಿ ಸರ್ವೆ ನಂ. 10 ಮತ್ತು 37/ಬಿ3 ರಲ್ಲಿರುವ ಆಸ್ತಿಗಳು ಮಾತ್ರ ಒಟ್ಟು ಕುಟುಂಬದ ಆಸ್ತಿಗಳು ಎನ್ನುತ್ತಾರೆ.

ಓ.ಎಸ್ ನಂ. 101/ 2018 ರ ದಾವೆಯ ತೀರ್ಪು ಮತ್ತು ಡಿಕ್ರಿಯಲ್ಲಿ ಅಪೀಲು ಸಲ್ಲಿಸಿದ್ದೇನೆ ಎಂದು ಹೇಳಿದ್ದು, ಅದರಲ್ಲಿ ಯಾವುದೆ ತಡಯಾಜ್ಞೆ ಇಲ್ಲ. ದಿಃ 23.06.2005 ರ ರಿಜಿಸ್ಟರ್ ವಿಭಾಗ ಪತ್ರದಂತೆ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರುವ ವಿಭಾಗ ಮಾಡಿಕೊಂಡ ಪ್ರಕಾರ ಅವರವರೆ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಅವರವರ ಭಾಗದ ಹಿಸ್ಸೆಯಲ್ಲಿ ಅವರವರೆ ಅವರಿಗೆ ಇಷ್ಟ ಬಂದಂತೆ ಬೆಳೆಯನ್ನು ಬೆಳೆಯುತ್ತಾ ಸಾಗುವಳಿ ಮಾಡಿಕೊಂಡು ಇದ್ದಾರೆ ಎಂದರೆ ಸರಿ. ಸದರಿ ಮೇಲೆ ಹೇಳಿದ ವಿಭಾಗ ಪತ್ರದಲ್ಲಿ ನಮೂದಿಸಿರುವ ಸಿ ಷೆಡ್ಯೂಲ್ ಸ್ವತ್ತು ನಮ್ಮ ತಂದೆಯ ಭಾಗಕ್ಕೆ ಬಂದಿತ್ತು ಎಂದರೆ ಸರಿ.

ದಿಃ 28.03.1996 ರಲ್ಲಿ ಸರ್ವೆ ನಂ. 58/9 ಜಮೀನನ್ನು 4 ನೇ ಪ್ರತಿವಾದಿಯಾದ ನನ್ನ ತಂದೆ ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನನ್ನ ತಂದೆ ಖರೀದಿಸಿದ ಕಾರಣ ಅದನ್ನು ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಗೆ ಹಾಗೂ ಬೇರೆ ವಿಭಾಗದಾರರಿಗೆ ಹೋಲಿಸಿದರೆ ನಮ್ಮ ತಂದೆಯ ಭಾಗಕ್ಕೆ ಕಡಿಮೆ ವಿಸ್ತೀರ್ಣ ತೋರಿಸಿರುತ್ತಾರೆ ಎಂದರೆ ಸರಿ. ಹಾಗೆ ವಿಭಾಗ ಆದ ನಂತರ ಅವರವರ ಹಿಸ್ಸೆಗೆ ಬಂದಂತಹ ಆಸ್ತಿಗಳಲ್ಲಿ ಬೇರೆ ಯಾರಿಗೂ ಹಕ್ಕು ಅಧಿಕಾರ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 58/9 2 ಎಕರೆ 39 ಗುಂಟೆಯನ್ನು ಉದ್ದೇಶ ಪೂರ್ವಕವಾಗಿ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸದರಿ ಆಸ್ತಿ ಬೇರೆಯವರದ್ದು ಎಂದು ನುಡಿಯುತ್ತಾರೆ. ಸದರಿ ಆಸ್ತಿ ಬೇರೆಯವರದ್ದು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಶೇಷ್ ಮಲ್ ಎಂಬುವವರ ಹೆಸರಿನಲ್ಲಿ ಇರುತ್ತದೆ. ದಿಃ 23.06.2005 ರಲ್ಲಿ ನನ್ನ ತಂದೆ ಮಾಡಿಕೊಂಡಿರುವ ವಿಭಾಗ ಪತ್ರದಲ್ಲಿ ನಮೂದಿಸಿರುವ ತಂದೆಯ ಅಣ್ಣ ತಮ್ಮಂದಿರ ಆಸ್ತಿಗಳಿಗೂ ನಮಗೂ ಯಾವುದೆ ಸಂಬಂಧ ಇಲ್ಲ ಅದರೂ ಸದರಿಯವರ ಭಾಗದ ಅಸ್ತಿಗಳನ್ನು ಈ ಕೇಸ್ ನಲ್ಲಿ ಸುಳ್ಳಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ. ತಂದೆಯ ಅಣ್ಣ ತಮ್ಮಂದಿರ ನಡುವೆ ಜಿದ್ದು ಸಾಧಿಸಬೇಕೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಸ್ವಂತ ಬುದ್ದಿ ಇಲ್ಲ, ಅವರಿವರ ಮಾತು ಅಂದರೆ ಹೇಳಿಕೆ ಮಾತು ಕೇಳುತ್ತೇನೆ ಎಂದರೆ ಸರಿಯಲ್ಲ. ತಂದೆಯ ಅಣ್ಣ ತಮ್ಮಂದಿರ ಭಾಗ ಬಂದಿರುವ ಅಸ್ತಿಗಳಲ್ಲಿ ಭಾಗ ಕೇಳುವಂತಹ ಯಾವುದೆ ಹಕ್ಕು ಹಿತಾಸಕ್ತಿ ನನಗೆ ಇಲ್ಲ ಎಂದರೆ ಸರಿಯಲ್ಲ. ಎಲ್ಲಾ ಅಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಸುಳ್ಳು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ.ಈ ಕೇಸ್ ಹಾಕಲು ವ್ಯಾಜ್ಯ ಕಾರಣ ಇಲ್ಲದಿದ್ದರೂ ಸುಳ್ಳು ವ್ಯಾಜ್ಯ ಕಾರಣ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಕಾನೂನು ಬದ್ದವಾಗಿ ಮೌಲ್ಯ ಮಾಪನ ಮಾಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.